ಅವರು ರಾಧೆಯ ಅಥವಾ ಗೋಪಿಯರ ಭಾವದ ಕುರಿತಾಗಿಯೊ ಅಥವಾ ಪ್ರೇಮಭಕ್ತಿಯ ಕುರಿತಾಗಿಯೊ ಮಾತನಾಡಲು ಆರಂಭಿಸಿದರೆಂದರೆ, ಆ ದಿನ ಅವರು ಬೇರೊಬ್ಬ ವ್ಯಕ್ತಿಯೇ ಆಗಿಬಿಡುತ್ತಿದ್ದರು. ಆ ಸಮಯದಲ್ಲಿ ಹೇಳುತ್ತಿದ್ದರು, "ರಾಧೆಯು ರಕ್ತ–ಮಾಂಸಗಳಿಂದ ಸೃಷ್ಟಿಯಾದವಳಲ್ಲ. ಅವಳು ಪ್ರೇಮಸಾಗರದಲ್ಲಿ ತೇಲುತ್ತಿರುವ ಒಂದು ನೀರಿನ ನೊರೆ" (Radha was not of flesh and blood. She was a froth in the ocean of Love). ಈ ಮಾತನ್ನು ಅವರು ಹಲವು ಬಾರಿ ಹೇಳಿದ್ದನ್ನು ನಾನು ಕೇಳಿದ್ದೇನೆ. ವೇಗವಾಗಿ ನಡೆದಾಡುತ್ತ, ತಮಗೆ ತಾವೇ ಎಂಬಂತೆ ಹೀಗೆ ಹೇಳಿಕೊಳ್ಳುತ್ತಿದ್ದರು; ಆದರೆ, ಸಾಮಾನ್ಯವಾಗಿ ಯಾರಾದರೂ ರಾಧಾಕೃಷ್ಣ ಅಥವಾ ಗೋಪಿಪ್ರೇಮದ ಬಗ್ಗೆ ಮಾತನಾಡಲು ಆರಂಭಿಸಿದರೆ, ಅಲ್ಲಿಯೆ ನಿಲ್ಲಿಸಿ ಹೇಳುತ್ತಿದ್ದರು, "ಶಂಕರರ ಗ್ರಂಥಗಳನ್ನು ಓದು, ಶಿವನ ಭಾವದಲ್ಲಿ ಮುಳುಗಿಹೋಗು." **ತ್ಯಾಗ, ಜ್ಞಾನ, ಧ್ಯಾನ, ಕರ್ಮ**– ಇವುಗಳ ಮೇಲೆಯೇ ಸ್ವಾಮೀಜಿ ಒತ್ತು ನೀಡುತ್ತಿದ್ದರು.

ಸ್ವಾಮೀಜಿಯ ಜೊತೆಗೆ ಹಿಮಾಲಯದಲ್ಲಿ ತಿರುಗಾಡುತ್ತಿದ್ದಾಗ ಒಮ್ಮೆ ಅವರು ಕಾಡಿನ ಮಾರ್ಗವಾಗಿ ಹೋಗಿ, ನನಗೆ ಬಳಸುದಾರಿಯಲ್ಲಿ ಹೋಗಲು ಹೇಳಿದರು; ಸ್ವಲ್ಪ ದೂರ ಹೋದ ಮೇಲೆ ಅವರು ಕಾಣಿಸಿಕೊಂಡರು, ನೋಡುತ್ತೇನೆ, ಅವರೊಬ್ಬರೆ ಇದ್ದಾರೆ, ಆದರೆ ನಗುತ್ತಿದ್ದಾರೆ, ಯಾರದೊ ಬಳಿಯಲ್ಲಿ ಮಾತನಾಡುತ್ತಿದ್ದಾರೆ, ಅವರ ಕಣ್ಣು ಹಾಗೂ ಮುಖದಲ್ಲಿ ಅದೆಂತಹ ಆನಂದ ತುಂಬಿಕೊಂಡಿದೆ! ಪ್ರಶ್ನಿಸಿದೆ, "ಸೋದರ, ಯಾರೊಂದಿಗೆ ಮಾತನಾಡುತ್ತಿದ್ದೆ?" ಅವರು ಸುಮ್ಮನೆ ತಲೆಯಲ್ಲಾಡಿಸಿ ನಕ್ಕರು.

ಸ್ವಾಮೀಜಿ ಮತ್ತು ನಾನು ಪರ್ವತಮಾರ್ಗವಾಗಿ ಒಟ್ಟಿಗೆ ನಡೆದು ಹೋಗುತ್ತ ಒಂದು ಕಡೆ ನೋಡುತ್ತೇವೆ, ಒಬ್ಬ ಸಾಧು ಧ್ಯಾನ ಮಾಡಲು ಕುಳಿತಿದ್ದಾನೆ; ತನ್ನ ತಲೆಯ ತನಕ ಇಡೀ ದೇಹವನ್ನು ಚೆನ್ನಾಗಿ ಬಟ್ಟೆಯಿಂದ ಸುತ್ತಿಕೊಂಡು, ಗೊರಕೆ ಹೊಡೆಯುತ್ತಿದ್ದಾನೆ. ಸ್ವಾಮೀಜಿ ಎತ್ತರದ ಧ್ವನಿಯಲ್ಲಿ ಹೇಳಿದರು, "ಅರೆ! ಈ ಘಟಿಂಗ ಕುಳಿತುಕೊಂಡೇ ನಿದ್ದೆ ಮಾಡುತ್ತಿದ್ದಾನೆ. ಈ ಘಟಿಂಗನ ಭುಜದ ಮೇಲೆ ಮೊಣಕೈಯಿಂದ ಒಂದು ಏಟು ಕೊಡು. ಹೀಗಿದ್ದರೆ ಇವನಿಗೆ ಯಾವ ಕಾಲದಲ್ಲಾದರೂ ಸಿದ್ಧಿ ಸಾಧ್ಯವೇನು?"

ಇವುಗಳನ್ನೆಲ್ಲ ಕಂಡು ಕೇಳಿಯೇ ಅವರು ಹೇಳುತ್ತಿದ್ದರು, "ಸತ್ತ್ವದ ಮುಸುಕು ಹಾಕಿಕೊಂಡು ಇಡೀ ದೇಶ ತಮಸ್ಸಿನ ಸಮುದ್ರದಲ್ಲಿ ಮುಳುಗುತ್ತಿದೆ, ಇವರನ್ನೆಲ್ಲ ಉಳಿಸಬೇಕಾದರೆ ಕಾಲ್ಬೆರಳಿನ ಉಗುರಿನಿಂದ ತಲೆಜುಟ್ಟಿನವರೆಗೂ ರಜೋಗುಣದ ಸಂಚಾರವಾಗಬೇಕು." ಆದ್ದರಿಂದಲೇ ಸ್ವಾಮೀಜಿ ಕರ್ಮಯೋಗಕ್ಕೆ ಅಷ್ಟು ಒತ್ತು ಕೊಟ್ಟಿದ್ದು. ಪರೋಪಕಾರ ಮಾಡಿದರೆ ನಿಜವಾಗಿಯೂ ಯಾರಿಗೆ ಉಪಕಾರವಾಗುವುದು? ನಮಗೇ. ಅದಕ್ಕಾಗಿಯೇ ಸ್ವಾಮೀಜಿಯ ಕರ್ಮಯೋಗ, ಸೇವಾಧರ್ಮ. ಸೇವೆಯಿಂದ ಚಿತ್ತಶುದ್ಧಿ, ಸೇವೆಯಿಂದ ಹೃದಯದ ವಿಸ್ತಾರ, ಸೇವೆಯಿಂದ ಎಲ್ಲ ಜೀವಿಗಳಲ್ಲಿಯೂ ಆತ್ಮದರ್ಶನ. ಆತ್ಮಜ್ಞಾನದ ನಂತರ ವಿಶ್ವಪ್ರೇಮ. ಆಗ ಹೀಗೆ ಅನುಭವವಾಗುತ್ತದೆ:

**ಬ್ರಹ್ಮನಿಂದ ಹಿಡಿದು ಕೀಟ, ಪರಮಾಣುವಿನವರೆಗೂ– ಸರ್ವಜೀವಿಗಳಲ್ಲಿಯೂ ಅವನೇ ಪ್ರೇಮಮಯನಿರುವನೆಂದು!**

---

**ನಿನ್ನೆದುರಿನ ಎಲ್ಲ ರೂಪಗಳಲ್ಲಿ ಹುಡುಕುವುದನ್ನು ಬಿಟ್ಟು ಇನ್ನೆಲ್ಲಿ ಹುಡುಕುವೆ ಈಶ್ವರನ?**
**ಯಾರು ಜೀವನನ್ನು ಪ್ರೀತಿಸುವರೊ ಅವರೇ ಈಶ್ವರನ ಸೇವಿಪರು**
**ಜೀವಸೇವೆಯೇ ಶಿವಸೇವೆ. ಜೀವವೆನ್ನುದೊಂದು ಇದೆಯೇನು?– ಎಲ್ಲವೂ ಶಿವನೆ!**

ಈ ಯುಗದಲ್ಲಿ ಠಾಕೂರರು (ಶ್ರೀರಾಮಕೃಷ್ಣರು) ಹಾಗೂ ಸ್ವಾಮೀಜಿಯವರೇ ಪ್ರತ್ಯಕ್ಷ ದೇವತೆಗಳು. ಠಾಕೂರರು ಸಾಕ್ಷಾತ್ ಭಗವಂತನೆಂಬುದರಲ್ಲಿ ಬಿಂದುಮಾತ್ರವೂ ಸಂದೇಹವೇ ಇಲ್ಲ. ಸ್ವಾಮೀಜಿಯವರ ದರ್ಶನ ಸುಲಭ, ಏಕೆಂದರೆ ಅವರು ದರ್ಶನ ನೀಡಲು ಸದಾ ಕಾತರರು. ಠಾಕೂರರ ದರ್ಶನ ಅಷ್ಟು ಸುಲಭವಲ್ಲ. ಈ ಯುಗದ ಜನರು ಸ್ವಾಮೀಜಿಯ ಮೂಲಕವೇ ಠಾಕೂರರನ್ನು ತಿಳಿಯುತ್ತಾರೆ. ಆದ್ದರಿಂದಲೇ ಜನರು ಮೊದಲು ಸ್ವಾಮೀಜಿಯ ಭಾವವನ್ನು ಸ್ವೀಕರಿಸುವುದು. ಈ ಎಲ್ಲ ಸೇವಾಕಾರ್ಯ, ಪರಿಹಾರಕಾರ್ಯ, ದೇಶಪ್ರೇಮ– ಇವುಗಳಿಂದಲೇ ಪರಿಶುದ್ಧವಾದ ವೇದಿಕೆ ತಯಾರಾಗುತ್ತದೆ, ಚಿತ್ತಶುದ್ಧಿಯಾಗುತ್ತದೆ. ನಂತರ ಆಧ್ಯಾತ್ಮಿಕತೆ –ಎಲ್ಲವೂ ಜೀವಸೇವೆಯಿಂದಲೇ ಶುರುವಾಗುತ್ತದೆ. ನಿಜವಾದ ಪ್ರೇಮವೆನ್ನುವುದು ಇನ್ನೂ ಬಹಳ ದೂರ!

ಕೈ, ತಲೆ ಮತ್ತು ಹೃದಯ (ಕರ್ಮ, ಜ್ಞಾನ ಹಾಗೂ ಪ್ರೇಮ) – ಈ ಮೂರರ ಕುರಿತು ವಿಚಾರ ಮಾಡಬೇಕು. ಸ್ವಾಮೀಜಿಯವರಲ್ಲಿ ಈ ಮೂರೂ ಸಂಪೂರ್ಣವಾಗಿ ಅರಳಿದ್ದವು. ನಾವು ಮೊದಲಿನಿಂದ (ಅಂದರೆ ಕರ್ಮದಿಂದ) ಪ್ರಯತ್ನಿಸಬೇಕು. ಸ್ವಾಮೀಜಿಯವರಷ್ಟು ಆಧ್ಯಾತ್ಮಿಕ ವ್ಯಕ್ತಿಯಾಗಲು ನಮಗೆ ಸಾಧ್ಯವಾಗದೇ ಇರಬಹುದು – ಅವರಲ್ಲಿದ್ದಷ್ಟು ಹೃದಯವಂತಿಕೆ ಹಾಗೂ ಜ್ಞಾನ ನಮ್ಮಲ್ಲಿರದೇ ಹೋಗಬಹುದು. ಆದರೆ, ಕರ್ಮದ ಮೂಲಕವಾಗಿಯೇ ನಾವು ಅವರನ್ನು

ಅನುಸರಣೆ ಮಾಡಬಹುದು. ಮಠದಲ್ಲಿ ಅವರು ಅತ್ಯಂತ ಕೊಳಕಾಗಿದ್ದ ಒಂದು ದೊಡ್ಡ ಹಂಡೆಯನ್ನು ಉಜ್ಜಿ, ತಿಕ್ಕಿ ತೊಳೆದಿದ್ದಾರೆ. ಒಂದು ಪಾತ್ರೆಯನ್ನೂ ನಮ್ಮಿಂದ ತೊಳೆದಿಡಲು ಸಾಧ್ಯವಿಲ್ಲವೆ? ಅವರು ಮಠದ ಶೌಚಾಲಯವನ್ನು ತೊಳೆದು ಶುದ್ಧಿ ಮಾಡಿದ್ದಾರೆ! ಅವರು ಒಂದು ದಿನ ಹೋಗಿ ನೋಡುತ್ತಾರೆ, ದುರ್ಗಂಧ ಒಂದೇ ಸಮನೆ ಬರುತ್ತಿದೆ. ಏನಾಗಿದೆಯೆಂದು ತಿಳಿಯಲು ಇನ್ನು ಹೆಚ್ಚು ಹೊತ್ತು ಬೇಕಾಗಲಿಲ್ಲ. ಮೂಗಿಗೆ ಬಟ್ಟೆ ಸುತ್ತಿಕೊಂಡು ಎರಡೂ ಕೈಯಲ್ಲಿ ಬಕೆಟ್ ತುಂಬ ನೀರನ್ನು ಹಿಡಿದು ಹೋಗುತ್ತಿದ್ದಾರೆ. ಆಗ ಎಲ್ಲರೂ ಇದನ್ನು ನೋಡಿ, "ಸ್ವಾಮೀಜಿ, ನೀವು!" ಎಂದು ಉದ್ಗರಿಸಿದರು. ಸ್ವಾಮೀಜಿ, ಮುಗುಳ್ನಗುತ್ತ ಹೇಳಿದರು, "ನೋಡು ಈಗ ಹೇಳ್ತಿದ್ದಾರೆ, 'ಸ್ವಾಮೀಜಿ ನೀವು!' ಎಂದು."

ಸ್ವಾಮೀಜಿ ಉಚ್ಚನೀತಿಯ ಅಭಿವ್ಯಕ್ತಿಯೇ ಆಗಿದ್ದರು! ಅವರು ರಕ್ತ-ಮಾಂಸಗಳಿಂದ ನಿರ್ಮಿತರಾದವರಲ್ಲ. ಭಾವದಿಂದ ರೂಪಿತರಾದವರು. ಅವರು "ರಾಧೆಯು ರಕ್ತ-ಮಾಂಸಗಳಿಂದ ಆದವಳಲ್ಲ. ಅವಳು ಪ್ರೇಮಸಾಗರದಲ್ಲಿ ತೇಲುತ್ತಿರುವ ಒಂದು ನೀರಿನ ನೊರೆ" ಎಂಬುದಾಗಿ ಹೇಗೆ ಹೇಳುತ್ತಿದ್ದರೊ, ಅವರೂ ಹಾಗೆಯೇ. ಈ ನೀತಿ (principle) ಎನ್ನುವುದು ಒಂದು ಭಯಾನಕ ವಸ್ತು! ಅದಕ್ಕಾಗಿ ಎಲ್ಲವನ್ನೂ ತ್ಯಜಿಸಬೇಕಾಗುತ್ತದೆ. ಆದರ್ಶವೆಂದರೆ ಈ ಉಚ್ಚನೀತಿಯೇ ಅಲ್ಲವೆ?

ಸ್ವಾಮೀಜಿಯ ದೇಶಪ್ರೇಮ ಅಷ್ಟು ಸುಲಭದ ಮಾತಲ್ಲ. ಇದು Patriotism ಅಲ್ಲ. ಇದು **ದೇಶಾತ್ಮಬೋಧೆ**. ಜನಸಾಧಾರಣರಿಗೆ ಇರುವುದು **ದೇಹಾತ್ಮಬೋಧೆ**. ಆದ್ದರಿಂದಲೇ, ಅವರು ದೇಶದ ಸೇವೆಗಾಗಿ ತತ್ಪರರಾಗಬೇಕು. ಹಾಗೆಯೇ ಸ್ವಾಮೀಜಿಯದು ದೇಶಾತ್ಮಬೋಧೆ. ಆದ್ದರಿಂದಲೇ, ಅವರು ಸಮಸ್ತ ದೇಶದ ಸುಖ ದುಃಖ, ಭೂತ ಭವಿಷ್ಯತ್ ಹಾಗೂ ವರ್ತಮಾನಕ್ಕಾಗಿ ಅಷ್ಟೊಂದು ಚಿಂತಿಸಿದ್ದು. ಅವರಿಗೆ ದೇಶಾತ್ಮಬೋಧೆಯೆಂಬುದೇ ಎಲ್ಲೆಯಲ್ಲ, ಅದಕ್ಕಿಂತಲೂ ಹೆಚ್ಚಿನದ್ದು **ವಿಶ್ವಾತ್ಮಬೋಧೆ**. ಜಗತ್ತಿನ ಎಲ್ಲ ಜೀವಿಗಳ ಉನ್ನತಿಗಾಗಿ ಚಿಂತೆ. ಅವರೆಲ್ಲರಿಗೂ ಭಕ್ತಿ-ಮುಕ್ತಿ ಹೇಗಾಗುತ್ತದೆ, ಅದರ ಕುರಿತಾಗಿಯೂ ಅವರಿಗೆ ಚಿಂತೆ; ಎಲ್ಲರ ಮುಕ್ತಿಯಾಗುವವರೆಗೂ ಅವರಿಗೆ ಮುಕ್ತಿಯಿಲ್ಲ.

ಒಂದು ರೀತಿಯಲ್ಲಿ, ಸ್ವಾಮೀಜಿ ತಮ್ಮ ಜೀವಿತದ ಕೊನೆಯಲ್ಲಿ ಮನುಷ್ಯಸಂಬಂಧವನ್ನು ಬಿಟ್ಟುಬಿಟ್ಟಿದ್ದರು. ಮಠದಲ್ಲಿ ದೊಡ್ಡ ಪ್ರಮಾಣದಲ್ಲಿ ಒಂದು ಪ್ರಾಣಿಸಂಗ್ರಹಾಲಯವನ್ನು ನಿರ್ಮಿಸಿದ್ದರು. ಚೀನಾದ ಬಾತುಕೋಳಿ (ಹೆಸರು: ಯಶೋಮತೀ), ರಾಜಹಂಸ (ಹೆಸರು: ಬೊಂಬೇಟೆ ಅಂದರೆ ಕಡಲುಗಳ್ಳ ಎಂದು), ಬಾತುಕೋಳಿ, ವಿವಿಧ ತರಹದ ಪಾರಿವಾಳಗಳು, ನಾಯಿ, ಕೊಕ್ಕರೆ, ಬೆಕ್ಕು, ಮೇಕೆ ಮೊದಲಾದವುಗಳನ್ನು ಸಾಕಿಕೊಂಡಿದ್ದರು. ಅವುಗಳಿಗೆ ತಾವೇ ಪ್ರೀತಿಯಿಂದ ಉಣಿಸುತ್ತಿದ್ದರು, ಸುಮ್ಮನೆ ಪ್ರೀತಿಯಿಂದ ಅವುಗಳನ್ನೇ ನೋಡುತ್ತ ಕುಳಿತಿರುತ್ತಿದ್ದರು. ಶ್ರೀಕೃಷ್ಣನು ತನ್ನ ಹಸು-ಕರುಗಳೊಂದಿಗೆ ಯಾವ ರೀತಿ ಆಟವಾಡುತ್ತಿದ್ದನೆಂದು ಗೊತ್ತಾಗಬೇಕಾದರೆ ಈ ದೃಶ್ಯವನ್ನು ನೋಡಿದರೆ ಅದರ ಸರಿಯಾದ ಕಲ್ಪನೆಯಾದೀತು. ಆ ಸಮಯದಲ್ಲಿ ಸ್ವಾಮೀಜಿಯ ಮುಖ ಹಾಗೂ ಕಣ್ಣುಗಳ ಭಾವದಲ್ಲಿ ಅದ್ಭುತವಾದ ಬದಲಾವಣೆ ಕಂಡುಬರುತ್ತಿತ್ತು. ಆಹಾ! ಅದನ್ನು ಹೇಗೆ ಹೇಳುವುದು? ಇದಕ್ಕೇ ಜೀವಪ್ರೇಮ, ವಿಶ್ವಪ್ರೇಮವೆನ್ನುವುದು.

ಶ್ರೀರಾಮಕೃಷ್ಣರು ಜಾಜ್ವಲ್ಯಮಾನರಾಗಿ ಬೇಲೂರುಮಠದಲ್ಲಿ ವಿರಾಜಿಸುತ್ತಿದ್ದಾರೆ. ಅವರೇ ಸ್ವತಃ ಸ್ವಾಮೀಜಿಗೆ ಹೇಳಿದರು, "ನೀನು ನನ್ನನ್ನು ನಿನ್ನ ತಲೆಯ ಮೇಲೆ ಹೊತ್ತುಕೊಂಡು ಎಲ್ಲಿ ತೆಗೆದುಕೊಂಡು ಹೋಗಿ ಇಡುವೆಯೋ ನಾನು ಅಲ್ಲೇ ವಾಸಿಸುತ್ತೇನೆ" ಎಂದು. ಬೇಲೂರುಮಠದ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಸ್ವಾಮೀಜಿ ಈ ಮಾತನ್ನು ತಮ್ಮ ಬಾಯಿಂದಲೇ ಆಡುತ್ತ, ಠಾಕೂರರ ಪವಿತ್ರ ಅಸ್ಥಿಯನ್ನು ತಲೆಯ ಮೇಲೆ ಹೊತ್ತು ತಂದು, ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಿದರು. ಕಾಶೀಪುರದಲ್ಲಿ ಠಾಕೂರರು ಶರೀರ ತ್ಯಜಿಸಿದ ತಕ್ಷಣ ಆಕಾಶದತ್ತ ನೋಡುತ್ತೇನೆ, ಚಂದ್ರನ ಸುತ್ತಲೂ ಜ್ಯೋತಿಯ ಮಂಡಲವಿದೆ. ಠಾಕೂರರು ನಿಜವಾಗಿಯೂ ಶರೀರ ಬಿಟ್ಟಿದ್ದಾರೆಯೇ ಎಂದು ಎಲ್ಲರಿಗೂ ಸಂದೇಹವಾಯಿತು. ಚಂದ್ರಮಂಡಲದ ಕಡೆಗೆ ಎಲ್ಲರ ದೃಷ್ಟಿಯನ್ನೂ ನಾನು ಸೆಳೆದೆ. ಸ್ವಾಮೀಜಿ ಎಲ್ಲರಿಗೂ, "ಅದನ್ನು ಗಮನಿಸಿ" ಎಂದು ಹೇಳಿದರು.

ಒಂದು ದಿನ ಸ್ವಾಮೀಜಿಯೊಂದಿಗೆ ಮಾತನಾಡುತ್ತ ಹೇಳಿದೆ, "ಸೋದರ, ಹಿಮಾಲಯದ ಬಹು ಎತ್ತರಕ್ಕೆ ಹೋಗಿ ಅಲ್ಲಿನ ಒಂದು ಶಿಖರದಲ್ಲಿ ಒಬ್ಬ ಸಾಧುವಿನ ದರ್ಶನ ಮಾಡಿ ವಿಸ್ಮಯಗೊಂಡೆನು. ಕುಷ್ಠ ರೋಗದಿಂದ ನರಳುತ್ತಿದ್ದ ಒಬ್ಬ ರೋಗಿಯ ಗಾಯವನ್ನು ಅವನು ತಾಯಿಯಂತೆ ತನ್ನ ಕೈಯಿಂದಲೇ ತೊಳೆದು ಶುಚಿಗೊಳಿಸುತ್ತಿದ್ದನು." ದಯಾನ್ವಿತ ಸಾಧುವಿನ ಕತೆಯನ್ನು ಕೇಳುತ್ತಿದ್ದ ಹಾಗೆ ಸ್ವಾಮೀಜಿಯ ಕಣ್ಣುಗಳು ತೇವಗೊಂಡವು. ಅವರು ಹೇಳಿದರು, "ಎಲ್ಲಿ, ನಾವಷ್ಟು ಮುಂದುವರೆದಿಲ್ಲವಲ್ಲ!" ನಂತರ ಮುಂದುವರೆಸುತ್ತ ನಾನು ಅವರಿಗೆ ತಿಳಿಸಿದೆ, "ಆದರೆ ಸೋದರ, ಆ ಸಾಧುವಿಗೆ ವೇಶ್ಯೆಯೊಬ್ಬಳೊಂದಿಗೆ ಸಂಬಂಧವಿರುವುದಾಗಿಯೂ ಕೆಲವು ಜನ ಹೇಳುತ್ತಾರೆ." ನನ್ನ ಕೊನೆಯ ಮಾತುಗಳನ್ನು ಕೇಳಿ ಕೋಪಗೊಂಡು ಸ್ವಾಮೀಜಿ ಹೀಗೆಂದರು: "ನೀಚ ಮನುಷ್ಯರ ಅಂತಹ ನಿಂದೆಗಳಿಗೆ ಕಿವಿಗೊಡಬೇಡ. ಏನೇನೋ ಬಾಯಿಗೆ ಬಂದಿದ್ದು ಹರಟುತ್ತಾರೆ. ನೀನು ಪ್ರತ್ಯಕ್ಷವಾಗಿ ನಿನ್ನ ಕಣ್ಣುಗಳಿಂದ ನೋಡಿದ್ದಕ್ಕಿಂತಲೂ ಹೆಚ್ಚಿನ ಸಾಕ್ಷ್ಯ ಬೇಕೇನು?" •